ಅಸಲು ದಾವೆ ಸಂಖ್ಯೆ - 118/2010
ಡಿ.ಡಬ್ಲ್ಯೂ - 01
ದಿನಾಂಕ: 07-11-2024
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು: ವಾದಿ ಪರ ಶ್ರೀ.ಎಂ.ಎಸ್.ಬಿ ವಕೀಲರಿಂದ**

ಶ್ರೀಮತಿ ಮಹಮುದಾ ಬೇಗಂ ಕೊಂ ಮಜಿದಖಾನ್ ಬಿರಾದರ ನವಾಬ ನಿಮಗೆ ಏನಾಗಬೇಕು ಎಂದರೆ ಅಜ್ಜಿಯಾಗಬೇಕು. ಶ್ರೀಮತಿ ಮಹಮುದಾಬೇಗಂ ರವರ ತಾಯಿ ಹುಸೇನಖಾತು ಕೋಂ ಫಯಾಜಖಾನ್ ಬಿರಾದರ ನವಾಬ ಎಂದರೆ ಸುಳ್ಳು. ಶ್ರೀಮತಿ ಮಹಮುದಾಬೇಗಂ ಕೊಂ ಮಜಿದಖಾನ್ ಬಿರಾದರ ನವಾಬರವರ ತಾಯಿಯ ಹೆಸರು ಏನು ಎಂದರೆ ನನಗೆ ಗೊತ್ತಿರುವುದಿಲ್ಲ. ವಾದಿಯರು ಸಲ್ಲಿಸಿರುವ ವಂಶವೃಕ್ಷವನ್ನು ನೋಡಿ ಬಿರಾದರರವರ ಕುಟುಂಬದ ಬಗ್ಗೆ ತಿಳಿದುಕೊಳ್ಳಲು ಪ್ರಯತ್ನ ಮಾಡಿದ್ದರೋ ಇಲ್ಲವೋ ಎಂದರೆ ನಾನು ಪ್ರಯತ್ನ ಪಟ್ಟಿರುತ್ತೇನೆ ನಂತರ ಆ ವಂಶವೃಕ್ಷವು ಸುಳ್ಳು ಎಂದು ಗೊತ್ತಾಗಿರುತ್ತದೆ. ವಾದಿಯರು ಸಲ್ಲಿಸಿರುವ ವಂಶವೃಕ್ಷದ ಪ್ರಕಾರ ಶ್ರೀಮತಿ ಮಹಮುದಾಬೇಗಂ ಕೋಂ ಮಜಿದಖಾನ್ ಬಿರಾದರ ನವಾಬರವರ ತಾಯಿಯ ಹೆಸರು ಶ್ರೀಮತಿ ಹುಸೇನಖಾತು ಕೋಂ ಫಯಾಜಖಾನ್ ನವಾಬ ಎಂದು ಇರುತ್ತದೆ ಆದರೆ ಅದು ಸುಳ್ಳು ಎಂದು ನೀವು ನುಡಿಯುತ್ತಿದ್ದೀರಿ ಹಾಗಾದರೆ ಅವರ ತಾಯಿಯ ಹೆಸರು ಹೇಳಲು ಆಗುತ್ತದೆಯಾ ಎಂದರೆ ನನಗೆ ಹೇಳಲು ಆಗುವುದಿಲ್ಲ ಮತ್ತು ಸದರಿ ವಿಷಯದ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ.

ಶ್ರೀಮತಿ ಅಹ್ಮದಬಿಬಿ ಮತ್ತು ಶ್ರೀಮತಿ ಹುಸೇನಖಾತುರವರು ಫಿರೋಜಖಾನ್ ದುಲಾಖಾನ್ ಬಿರಾದರ ನವಾಬರವರ ಮಕ್ಕಳು ಎಂದರೆ ಸುಳ್ಳು. ಫಿರೋಜಖಾನ್ ದುಲಾಖಾನ್ ಬಿರಾದರ ನವಾಬರವರಿಗೆ ಎಷ್ಟು ಮಕ್ಕಳು ಎಂದು ಏನಾದರು ಮಾಹಿತಿ ಸಂಗ್ರಹ ಮಾಡಿದ್ದೀರಾ ಎಂದರೆ ಮಾಹಿತಿ ಸಂಗ್ರಹಿಸಲಾಗಿ ಅಂತಹ ವ್ಯಕ್ತಿಯೇ ಇಲ್ಲ ಎಂದು ತಿಳಿದು ಬಂದಿರುತ್ತದೆ ಮತ್ತು ಸುಳ್ಳಾಗಿರುತ್ತದೆ. ಫಿರೋಜಖಾನ್ ದುಲಾಖಾನ್ ಬಿರಾದರ ನವಾಬರವರು ಮಾಹಿತಿ ಸಂಗ್ರಹ ಮಾಡಿ ಆ ವ್ಯಕ್ತಿಯೇ ಇಲ್ಲ ಎಂದು ಯಾರ ಮುಖಾಂತರ ತಿಳಿದು ಕೊಂಡಿದ್ದೀರಿ ಎಂದರೆ ಓಣಿಯ ಜನರ ಮುಖಾಂತರ ಮತ್ತು ಹಿರಿಯರ ಮುಖಾಂತರ ತಿಳಿದುಕೊಂಡಿರುತ್ತೇನೆ, ಆದರೆ ಯಾವುದೇ ದಾಖಲೆಗಳನ್ನು ಸಂಗ್ರಹ ಮಾಡಿರುವುದಿಲ್ಲ.

ಫಿರೋಜಖಾನ್ ದುಲಾಖಾನ್ ಬಿರಾದರ ನವಾಬ ಎಂಬ ವ್ಯಕ್ತಿಯೇ ಇಲ್ಲ ಎಂದು ಹಿರಿಯರಿಂದ ತಿಳಿದುಕೊಂಡ ಬಗ್ಗೆ ಸದರಿ ಹಿರಿಯರ ಹೆಸರುಗಳನ್ನು ಏನಾದರು ನಿಮ್ಮ ಕೈಫಿಯತನಲ್ಲಿಯಾಗಲಿ ಅಥವಾ ತಕರಾರಿನಲ್ಲಿಯಾಗಲಿ ನಮೂದು ಮಾಡಿದ್ದೀರಾ ಎಂದರೆ ಮಾಡಿರುವುದಿಲ್ಲ.

ನೀವು ಸಲ್ಲಿಸಿರುವ ವಂಶವೃಕ್ಷವು ಯಾವ ಕಂದಾಯ ಅಧಿಕಾರಿಗಳು ಸಹ ನೀಡಿರುವುದಿಲ್ಲ ಎಂದರೆ ನ್ಯಾಯಲಯದ ಸದರಿ ವಂಶವೃಕ್ಷವನ್ನು ಪಡೆದು ಸಲ್ಲಿಸಿರುತ್ತೇನೆ. ನಾನು ವಂಶವೃಕ್ಷವನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ. ನೀವು ಸಲ್ಲಿಸಿರುವ ವಂಶವೃಕ್ಷವು ಅಸಲು ದಾವಾ ಸಂಖ್ಯೆ 171/1984 ರ ದಾವೆಯಲ್ಲಿ ಸಲ್ಲಿಸಿದ ವಂಶವೃಕ್ಷ ಆಗಿರುತ್ತದೆ ಎಂದರೆ ಸರಿ. ಸದರಿ ವಂಶವೃಕ್ಷವನ್ನು ವಾದಿರವರು ತಯಾರು ಮಾಡಿ ಸಲ್ಲಿಸಿದ ವಂಶವೃಕ್ಷ ಆಗಿರುತ್ತದೆ ಎಂದರೆ ವಾದಿ ಮತ್ತು ನಾನು ಕೂಡಿ ಮಾಡಿದ ವಂಶವೃಕ್ಷ ಆಗಿರುತ್ತದೆ. ಮುಂದುವರೆದು ಸಾಕ್ಷಿಯು ಸ್ವತಃ ಸದರಿ ವಂಶವೃಕ್ಷವನ್ನು ಎಲ್.ಸಿ ನಂಬರ 514/43 ರಲ್ಲಿ ಸಲ್ಲಿಸಿದ ವಂಶವೃಕ್ಷದಂತೆ ತಯಾರು ಮಾಡಿ ಸಲ್ಲಿಸಿರುತ್ತೇನೆ. ಅಸಲು ದಾವಾ ಸಂಖ್ಯೆ 171/1984 ರಲ್ಲಿ ಸಲ್ಲಿಸಿದ ವಂಶವೃಕ್ಷವು ಯಾವುದೇ ಕಂದಾಯ ಅಧಿಕಾರಿಗಳಿಂದ ರುಜುವಾತು ಆಗಿರುವುದಿಲ್ಲ ಎಂದರೆ ಸಾಕ್ಷಿಯು ನ್ಯಾಯಾಲಯದ ಕಡೆಯಿಂದ ಆಗಿರುತ್ತದೆ ಆದರೆ ಯಾವುದೇ ಕಂದಾಯ ಅಧಿಕಾರಿಗಳಿಂದ ಆಗಿರುವುದಿಲ್ಲ.

ಎಲ್.ಸಿ ನಂಬರ 514/43 ರಲ್ಲಿ ಸಲ್ಲಿಸಿದ ವಂಶವೃಕ್ಷದಂತೆ ಅಸಲು ದಾವಾ ಸಂಖ್ಯೆ 171/1984 ರಲ್ಲಿ ಸಲ್ಲಿಸಿದ ವಂಶವೃಕ್ಷವನ್ನು ಹೋಲುತ್ತದೆ ಎಂದು ಎಲ್.ಸಿ ನಂಬರ 514/43 ರ ದಾಖಲೆಯನ್ನು ಏನಾದರು ನ್ಯಾಯಾಲಯಕ್ಕೆ ಸಲ್ಲಿಸಿದ್ದೀರಾ ಎಂದರೆ ಸಲ್ಲಿಸಿರುತ್ತೇನೆ. ಸದರಿ ಎಲ್.ಸಿ ನಂಬರ 514/43 ರಲ್ಲಿ ಯಾವುದಾದರು ಕಂದಾಯ ಅಧಿಕಾರಿಗಳು ನೀಡಿದ ವಂಶವೃಕ್ಷವನ್ನು ಏನಾದರು ನ್ಯಾಯಾಲಯಕ್ಕೆ ಸಲ್ಲಿಸಿದ್ದೀರಾ ಎಂದರೆ ಸಲ್ಲಿಸಿರುವುದಿಲ್ಲ. ನ್ಯಾಯಾಲಯವು ನೀಡಿದ ಪ್ರಮಾಣೀಕೃತ ಪ್ರತಿಯನ್ನು ಸಲ್ಲಿಸಿರುತ್ತೇನೆ. ಎಲ್.ಸಿ ನಂಬರ 514/43 ರಲ್ಲಿ ವಾದ ಪತ್ರದಲ್ಲಿ ನಮೂದಿಸಿದ ವಂಶವೃಕ್ಷವನ್ನು ಬಿಟ್ಟು ಬೇರೆ ಪ್ರತ್ಯೇಕ ವಂಶವೃಕ್ಷವನ್ನು ಏನಾದರು ಸಲ್ಲಿಸಿದ್ದೀರಾ ಎಂದರೆ ವಾದ ಪತ್ರದಲ್ಲಿಯೇ ಇರುತ್ತದೆ ಎಂದು ಯಾವುದೇ ಪ್ರತ್ಯೇಕ ವಂಶವೃಕ್ಷವನ್ನು ಸಲ್ಲಿಸಿರುವುದಿಲ್ಲ. ಮುಂದುವರೆದು ಲಾಸ್ಟ್ ವಾರ್ಡನವರು ವಂಶವೃಕ್ಷವನ್ನು ಸಲ್ಲಿಸಿರುತ್ತಾರೆ. ಲಾಸ್ಟ್ ವಾರ್ಡನವರು ಸಲ್ಲಿಸಿದ್ದಾರೆ ಎನ್ನಲಾದ ವಂಶವೃಕ್ಷವನ್ನು ಏನಾದರು ನೀವು ನ್ಯಾಯಾಲಯಕ್ಕೆ ಸಲ್ಲಿಸಿದ್ದೀರಾ ಎಂದರೆ ಸಲ್ಲಿಸಿರುವುದಿಲ್ಲ. ಸರ್ದಾರ ಮಹೆಬೂಬಅಲಿ ಖಾನರವರ ಪೂರ್ವಜರ ಸಂಪೂರ್ಣ ವಂಶವೃಸ್ಥರಿಗೆ

ಸಂಬಂಧಪಟ್ಟಂತೆ ಸವಣೂರು ಕಂದಾಯ ಇಲಾಖೆಗಳಲ್ಲಿ ಏನಾದರು ಮಾಹಿತಿ ಸಂಗ್ರಹ ಮಾಡಿ ಸದರಿ ದಾಖಲೆಗಳನ್ನು ಏನಾದರು ನೀವು ನ್ಯಾಯಾಲಯಕ್ಕೆ ಸಲ್ಲಿಸಿದ್ದೀರಾ ಎಂದರೆ ಸಲ್ಲಿಸಿರುವುದಿಲ್ಲ.

ಸರ್ದಾರ ಮಹೆಬೂಬಅಲಿ ಖಾನರವರ ಪೂರ್ವಜರ ಸಂಪೂರ್ಣ ವಂಶವೃಸ್ಥರಿಗೆ ಸಂಬಂಧಪಟ್ಟ ವಂಶವೃಕ್ಷವನ್ನು ಕಂದಾಯ ಇಲಾಖೆಯಿಂದಾಗಲಿ ಅಥವಾ ಸಂಬಂಧಪಟ್ಟ ಇಲಾಖೆಯಿಂದಾಗಲಿ ಪಡೆದುಕೊಂಡು ಬಂದು ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಿದರೆ ಸರ್ದಾರ ಮಹೆಬೂಬಅಲಿ ಖಾನರವರ ವಂಶಸ್ಥರ ಸಂಪೂರ್ಣ ಮಾಹಿತಿ ಮತ್ತು ಅವರ ವಾರಸುದಾರರು ಯಾರ್ಯಾರು ಇರುತ್ತಾರೆ ಎಂಬ ಮಾಹಿತಿ ತಿಳಿಯುತ್ತದೆ ಎಂದರೆ ಅದು ನಮ್ಮ ವಕೀಲರಿಗೆ ಗೊತ್ತಿರುತ್ತದೆ.

ಎಲ್.ಸಿ ನಂಬರ 514/43 ರಲ್ಲಿ ಅಕ್ಬರಖಾನ ಬಿರಾದರರವರಿಗೆ ಮೊದಲನೇ ಹೆಂಡತಿ ಮತ್ತು ಎರಡನೆ ಹೆಂಡತಿ ಇದ್ದಾರೆ ಎಂದು ಪ್ರತ್ಯೇಕವಾಗಿ ತೋರಿಸಿದ್ದಾರೆ ಎಂದರೆ ಸರಿ. ಸದರಿ ಎಲ್.ಸಿ ನಂಬರ 514/43 ರಲ್ಲಿ ಮೊದಲನೇ ಹೆಂಡತಿಗೆ ಎಷ್ಟು ಮಕ್ಕಳು ಮತ್ತು ಎರಡನೇ ಹೆಂಡತಿಗೆ ಎಷ್ಟು ಮಕ್ಕಳು ಎಂದು ತೋರಿಸಿದ್ದಾರೆ ಎಂದರೆ ಸರಿ. ಅಸಲು ದಾವಾ ಸಂಖ್ಯೆ 171/1984 ರಲ್ಲಿ ಸಲ್ಲಿಸಿದ ವಂಶವೃಕ್ಷವು ಎಲ್.ಸಿ 514/43 ರಲ್ಲಿ ಸಲ್ಲಿಸಿದ ವಂಶವೃಕ್ಷದಂತೆ ಇರುತ್ತದೆ ಎಂದು ಹೇಳಿರುತ್ತೀರಿ ಆದರೆ ಅಸಲು ದಾವಾ ಸಂಖ್ಯೆ 171/1984 ರಲ್ಲಿ ಸಲ್ಲಿಸಿದ ವಂಶವೃಕ್ಷರಲ್ಲಿ ಅಕ್ಬರಖಾನ ನವಾಬರವರಿಗೆ ಇಬ್ಬರು ಹೆಂಡತಿಯರು ಎಂದು ಪ್ರತ್ಯೇಕವಾಗಿ ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ. ಎಲ್.ಸಿ ನಂಬರ 514/43 ರಲ್ಲಿ ವಾದ ಪತ್ರದ ಜೊತೆ ಪ್ರತ್ಯೇಕವಾಗಿ ವಂಶವೃಕ್ಷವನ್ನು ಏನಾದರು ಹಾಜರು ಮಾಡಿದ್ದೀರಾ ಎಂದರೆ ಹಾಜರು ಮಾಡಿರುವುದಿಲ್ಲ.

ಎಲ್.ಸಿ ನಂಬರ 514/43 ರಲ್ಲಿ ಯಾವುದೇ ರೀತಿಯ ಪ್ರತ್ಯೇಕ ವಂಶವೃಕ್ಷ ಇರಲಿಲ್ಲ, ನಿಮ್ಮ ಅನುಕೂಲಕ್ಕೆ ತಕ್ಕಂತೆ ನೀವು ವಂಶವೃಕ್ಷವನ್ನು ತಯಾರಿಸಿಕೊಂಡು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆ 171/1984 ರಲ್ಲಿ ಮೋಸದಿಂದ ಪಡೆದ ಡಿಕ್ರಿಗೆ ಅನುಕೂಲವಾಗುವಂತೆ ಫಿರೋಜಖಾನ್ ದುಲಾಖಾನ್ ನವಾಬ ಎಂಬ ವ್ಯಕ್ತಿಯು ಇದ್ದಿರಲಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ವಾದಿಯರು ಸರ್ದಾರ ಮಹೆಬೂಬಅಲಿ ಖಾನರವರ ಪೂರ್ವಜರಿಗೆ ಸಂಬಂಧಪಟ್ಟ ವಂಶವೃಕ್ಷವನ್ನು

ಹಾಜರುಪಡಿಸಿದ್ದಾರೆ ಎಂದರೆ ಸರಿಯಲ್ಲ. ಫಿರೋಜಖಾನ ದುಲಾಖಾನ ಬಿರಾದರ ನವಾಬರವರಿಗೆ ಅಹ್ಮದಬಿಬಿ ಮತ್ತು ಹುಸೇನಖಾತು ಎಂಬ ಇಬ್ಬರು ಮಕ್ಕಳು ಎಂದರೆ ಸರಿಯಲ್ಲ. ಅದರಲ್ಲಿ ಹುಸೇನಖಾತುರವರ ಮಗಳು ಮಹಮುದಾ ಬೇಗಂ ಕೋಂ ಮಜಿದಖಾನ್ ಬಿರಾದರ ನವಾಬರವರು ನಿಮ್ಮ ಅಜ್ಜಿ ಎಂದರೆ ಸರಿಯಲ್ಲ. ಮಹಮುದಾಬೇಗಂ ಕೊಂ ಮಜಿದಖಾನ್ ಬಿರಾದರ ಯಾರ ಮಗಳು ಎಂದರೆ ನನಗೆ ಗೊತ್ತಿಲ್ಲ. ಅಹ್ಮದಬಿಬಿರವರಿಗೆ ರಹೀಮಾನಖಾನ್ ಮತ್ತು ಲಾಡಲಿ ಬೇಗಂ ಎಂಬ ಇಬ್ಬರು ಮಕ್ಕಳು ಇದ್ದರು ಎಂದರೆ ನನಗೆ ಗೊತ್ತಿಲ್ಲ. ವಾದಿಯರು ಸಲ್ಲಿಸಿರುವ ವಂಶವೃಕ್ಷದಲ್ಲಿ ಅಬ್ದುಲ ರಶೀದಖಾನ್ ಬಿರದಾರ ನವಾಬರವರ ಮಕ್ಕಳ ಸಂಪೂರ್ಣ ಮಾಹಿತಿ ನಮೂದಿಸಿದ್ದಾರೆ ಎಂದರೆ ಅಬ್ದುಲ ರಶೀದಖಾನ್ ಬಿರಾದರ ನವಾಬರವರ ಮಾಹಿತಿ ನನಗೆ ಗೊತ್ತು ಮತ್ತು ಅವರ ಮಕ್ಕಳು ಬಗ್ಗೆಯೂ ಗೊತ್ತು ಆದರೆ ಅವರ ತಂದೆ-ತಾಯಿಗಳ ಬಗ್ಗೆ ನನಗೆ ಗೊತ್ತಿರುವುದಿಲ್ಲ. ವಾದಿಯರು ಸಲ್ಲಿಸಿರುವ ವಂಶವೃಕ್ಷವನ್ನು ನೀವು ಪರಿಶೀಲನೆ ಮಾಡಿದ್ದೀರಾ ಎಂದರೆ ನೋಡಿರುತ್ತೇನೆ. ಸದರಿ ಅಬ್ದುಲ ರಶೀದಖಾನ್ ಬಿರಾದರ ನವಾಬರವರು ಜೀವಂತವಾಗಿರುವುದಿಲ್ಲ.

ಅಬ್ದುಲ ರಶೀದಖಾನ್ ರವರ ತಮ್ಮನ ಹೆಸರು ದಿಲೇರಖಾನ್ ಎಂದರೆ ಸರಿ. ದಿಲೇರಖಾನ್ ರವರು ಮರಣ ಹೊಂದಿರುತ್ತಾರೆ. ಸದರಿ ದಿಲೇರಖಾನ್ ರವರ ಹೆಂಡತಿ ಮತ್ತು ಮಕ್ಕಳ ಬಗ್ಗೆ ಮಾಹಿತಿ ಇದೆಯಾ ಎಂದರೆ ಇರುತ್ತದೆ. ದಿಲೇರಖಾನ್ ರವರಿಗೆ ಸಲೀಮಾಬೇಗಂ ಎಂಬ ಹೆಂಡತಿ ಇದ್ದು, ಅವರಿಗೆ ಮಹೆಬೂಬಅಲಿಖಾನ್, ಜಾಕಿರಾ ಬೇಗಂ, ನಾಜಿರಾ ಬೇಗಂ, ಹಾಜಿರಾ ಬೇಗಂ, ವಲಿಮಹಮ್ಮದಖಾನ್, ನಿಯಾಜ ಅಹ್ಮದಖಾನ್, ಮಜಿದಖಾನ್, ಕುಬ್ರಾಬೇಗಂ, ಸೋಗರಾ ಬೇಗಂ, ಅಹ್ಮದಬಿಬಿ ಮತ್ತು ಅಮೀರಾಬಿ ಎಂಬ ಮಕ್ಕಳು ಇರುತ್ತಾರೆ ಎಂದರೆ ಸರಿ. ಅಬ್ದುಲ ರಶೀದಖಾನ್ ರವರ ವಂಶವೃಕ್ಷದ ಭಾಗವನ್ನು ನಿ.ಪಿ.110(ಡಿ) ಎಂದು ಗುರುತಿಸಲಾಯಿತು ಮತ್ತು ದಿಲೇರಖಾನ್ ರವರ ವಂಶವೃಕ್ಷದ ಭಾಗವನ್ನು ನಿ.ಪಿ.110(ಇ) ಎಂದು ಗುರುತಿಸಲಾಯಿತು. ಅಬ್ದುಲ ರಶೀದಖಾನ್ ರವರ ಪೂರ್ವಜರ ಬಗ್ಗೆ ಮಾಹಿತಿ ಸಂಗ್ರಹ ಮಾಡಲು ನೀವೇನಾದರು ಪ್ರಯತ್ನಪಟ್ಟಿದ್ದೀರಾ ಎಂದರೆ ಪಟ್ಟಿರುವುದಿಲ್ಲ.

ಸಲೀಮಾಬೇಗಂ, ತಾಹೆರಾ ಬೇಗಂ, ಆತಾಮಹಮ್ಮದಖಾನ್ ರವರ ಬಗ್ಗೆ ಮಾಹಿತಿ ಇದೆಯಾ ಎಂದರೆ ಇರುತ್ತದೆ. ಸದರಿ ಮೂರು ಜನರು ಜೀವಂತವಾಗಿರುವುದಿಲ್ಲ. ಸಲೀಮಾಬೇಗಂ, ತಾಹೆರಾ ಬೇಗಂ, ಆತಾಮಹಮ್ಮದಖಾನ್ ರವರು ಲಾಡಲಿ ಬೇಗಂ ಕೋಂ ನಿಯಾಜ ಮಹಮದಖಾನ್ ಪಠಾನರವರ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ತಬ್ರೇಜಖಾನ್,

ಸಾಲೇಹಾ ಬೇಗಂ, ವಲಿಮಹಮ್ಮದಖಾನ್, ಸಲ್ಮಾ ಬೇಗಂ, ಅಮ್ಜದಖಾನ್ ಮತ್ತು ಹಮೀದಖಾನ್ ರವರು ತಾಹೇರಾಬೇಗಂ ರವರ ಮಕ್ಕಳು ಎಂದರೆ ಸರಿ. ಸದರಿ ಸಲೀಮಾಬೇಗಂ, ತಾಹೇರಾಬೇಗಂ, ಆತಾಮಹಮ್ಮದಖಾನ್‌ರವರ ಮತ್ತು ತಾಹೇರಾಬೇಗಂ ರವರ ಮಕ್ಕಳ ವಂಶವೃಕ್ಷದ ಭಾಗವನ್ನು ನಿಪಿ 110(ಎಫ್) ಎಂದು ಗುರುತಿಸಲಾಯಿತು. ಸಲೀಮಾಬೇಗಂ, ತಾಹೇರಾಬೇಗಂ ಮತ್ತು ಆತಾಮಹಮ್ಮದಖಾನ್ ರವರ ಪೂರ್ವಜರ ಬಗ್ಗೆ ಮಾಹಿತಿ ಸಂಗ್ರಹ ಮಾಡಲು ನೀವೇನಾದರು ಪ್ರಯತ್ನಪಟ್ಟಿದ್ದೀರಾ ಎಂದರೆ ಪಟ್ಟಿರುವುದಿಲ್ಲ.

ರವುಫಖಾನ್ ಅಹ್ಮದಖಾನ್ ಬಾನುಬೇಗಂರವರ ಬಗ್ಗೆ ನನಗೆ ಗೊತ್ತು. ರವುಫಖಾನ್ ರವರಿಗೆ ಫಯಾಜಖಾನ್ ಜಕಿಯಾ ಬೇಗಂ, ರಿಯಾಜಖಾನ್, ಆಸಿಯಾ ಬೇಗಂ, ಅಲ್ತಾಫಖಾನ್, ಅಖ್ಲಾಕಖಾನ್ ಮತ್ತು ಆತೀಕಖಾನ್ ಎಂಬ ಮಕ್ಕಳು ಇರುತ್ತಾರೆ ಎಂದರೆ ಸರಿ. ಅಹ್ಮದಖಾನ್ ತಬ್ರೇಜಖಾನ್ ಬಿರಾದರರವರಿಗೆ ರಜಿಯಾಬೇಗಂ, ತಬ್ರೇಜಖಾನ್, ತಾಹೇರಾ ಬೇಗಂ, ಅಫ್ಜಲಖಾನ್, ಜಿಯಾಬೇಗಂ, ಜಾಹಿದಾಬೇಗಂ, ಸಲ್ಮಾಬೇಗಂ ಮತ್ತು ಮಜಿದಖಾನ್ ಎಂಬ ಮಕ್ಕಳು ಇರುತ್ತಾರೆ ಎಂದರೆ ಸರಿ. ರವುಫಖಾನ್, ಅಹ್ಮದಖಾನ್ ಮತ್ತು ಬಾನು ಬೇಗಂ ರವರ ವಂಶಾವಳಿಯ ಭಾಗವನ್ನು ನಿಪಿ 110(ಬಿ) ಎಂದು ಗುರುತಿಸಲಾಯಿತು. ರವುಫಖಾನ್, ಅಹ್ಮದಖಾನ್, ಬಾನುಬೇಗಂರವರ ಪೂರ್ವಜರ ಬಗ್ಗೆ ಮಾಹಿತಿ ಸಂಗ್ರಹ ಮಾಡಲು ನೀವೇನಾದರು ಪ್ರಯತ್ನಪಟ್ಟಿದ್ದೀರಾ ಎಂದರೆ ಪಟ್ಟಿರುವುದಿಲ್ಲ.

ನೀವು ಆದರಿಸತಕ್ಕಂತಹ ಎಲ್.ಸಿ 514/43 ರಲ್ಲಿ ತೋರಿಸಿದ ವಂಶವೃಕ್ಷದಲ್ಲಿ, ನೀವು ಈ ಪ್ರಕರಣದಲ್ಲಿ ಸಲ್ಲಿಸಿದ ಕೈಫಿಯತನಲ್ಲಿ ಹಾಗು ಅಸಲು ದಾವಾ ಸಂಖ್ಯೆ 171/1984 ರಲ್ಲಿ ಹಾಜರುಪಡಿಸಿದ ವಂಶಾವಳಿಯಲ್ಲಿ ನಿಪಿ.110(ಎ) ರಿಂದ ನಿಪಿ.110(ಜಿ) ರಲ್ಲಿ ತೋರಿಸಿದ ವಂಶಾವಳಿಯ ಬಗ್ಗೆ ಉಲ್ಲೇಖ ಇರುವುದಿಲ್ಲ ಎಂದರೆ ಸರಿ. ಅಸಲು ದಾವಾ ಸಂಖ್ಯೆ 171/1984 ರಲ್ಲಿ ಮತ್ತು ಸದರಿ ದಾವೆಯಲ್ಲಿ ನೀವು ಸಲ್ಲಿಸಿದ ಕೈಫಿಯತನಲ್ಲಿ ಸರ್ದಾರ ಮಹೆಬೂಬ ಅಲಿಖಾನ್ ರವರ ಸಂಪೂರ್ಣ ವಂಶಾವಳಿಯ ಬಗ್ಗೆ ಯಾವುದೇ ಮಾಹಿತಿ ನೀಡಿರುವುದಿಲ್ಲ ಎಂದರೆ ಸಾಕ್ಷಿಯು ನಾನು ಮಾಹಿತಿಯನ್ನು ನೀಡಿರುತ್ತೇನೆ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸವಣೂರು.